MR. SPEAKER.—The question is:

"That leave be granted to introduce the Karnataka Village Panchayats and Local Boards (Second Amendment) Bill, 1978."

The motion was adopted and leave was granted.

SRI K. PRABHAKAR.—Sir, I introduce the Karnataka Village Panchayats and Local Boards (Second Amendment) Bill, 1978.

MR. SPEAKER.—The Bill is introduced. * *

Karnataka Municipal Corporation (Amendment) Act, 1978

Introduction

SRI H. C. SRIKANTAIAH (Minister for Municipal Administration).—Sir, I beg to move that:

"Leave be granted to introduce the Karnataka Municipal Corporation (Amendment) Bill, 1978.

MR. SPEAKER.—The question is:

"That leave be granted to introduce the Karnataka Municipal Corporations (Amendment) Bill, 1978."

The motion was adopted and leave was granted.

SRI H. C. SRIKANTAIAH.—Sir, I beg to introduce the Karnataka Municipal Corporations (Amendment) Bill, 1978."

MR. SPEAKER.—The Bill is introduced. * *

Karnataka Sales Tax (Amendment) Bill, 1978

Motion to Consider

† SRI S. M. YAHYA (Minister for Finance).—I beg to move:

"That the Karnataka Sales Tax (Amendment) Bill, 1978 be taken into consideration."

The Question was proposed

Sir, certain amendments are necessitated due to certain pronouncements and experience regarding the proper implementation of certain provisions. The main feature of the amendment is that certain multi-point should be transferred to single-point. A few items are taken to convert multi-point to single-point. This Bill helps to collect revenue and also helps to avoid cumbersome process.

* * Bills appended as Annexures I to IV to this volume.

Secondly there is enhancement in respect of certain commodities so as to be on par or a little less than those obtaining in Tamil Nadu or Kerala. This will fetch revenue to the government but it will not affect the common man as such. There are certain procedural amendments with the intention of implementing the Act properly.

† ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ತಂದಿರತಕ್ಕ ಸೇಲ್ಸ್ ಟ್ಯಾಕ್ಸ್ ತಿದ್ದುಪಡಿಯಲ್ಲಿ ಕೆಲವು ಭಾಗಗಳಂತೂ ಸ್ವಾಗತಾರ್ಹ. ಮಲ್ಟಿಪಾಯಿಂಟ್ ಇದ್ದಂಥ ಕೆಲವು ಅಂಶಗಳನ್ನು ಸಿಂಗಲ್‌ಪಾಯಿಂಟ್ ಮಾಡಿರತಕ್ಕದ್ದು ಸ್ವಾಗತಾರ್ಹವಾದುದು. ೧೮(ಎ) ನಲ್ಲಿ ಏನು ತಿದ್ದುಪಡಿ ತಂದಿದ್ದಾರೆ ಇದು ಸ್ವಾಗತಾರ್ಹವಾಗಿರತಕ್ಕಂಥಾದ್ದು. ಇದರಲ್ಲಿ ಕೆಲವು ಅಂಶ ಗಳನ್ನು ಮಾತ್ರ ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಈ ತಿದ್ದುಪಡಿಯಲ್ಲಿ ತಮಿಳುನಾಡು, ಆಂಧ್ರ ಮತ್ತು ಮಹಾರಾಷ್ಟ್ರದ ಕೆಲವು ಅಂಶಗಳನ್ನು ಮಾತ್ರ ಏನು ಅಳವಡಿಸಿಕೊಂಡಿದ್ದಾರೆ. ಅದೂ ಕೂಡ ಸ್ವಾಗತಾರ್ಹವಾದುದು. ಆದರೆ ಕೆಲವು ವಸ್ತುಗಳಿಗೆ ಟ್ಯಾಕ್ಸ್ ವಿಧಿಸಿರತಕ್ಕಂಥಾದ್ದು ಸಕ್ರಮ ಅಲ್ಲ ಎಂದು ನಾನು ಹೇಳುವುದಕ್ಕೆ ಅಪೇಕ್ಷಿಪಡುತ್ತೇನೆ. ಇದರಲ್ಲಿ ೨೩ ಕಾಲಂ ೨ನೆಲ್ಲಿ ಐಸ್, ಐಸ್‌ಕ್ಯಾಂಡಿ, ಐಸ್-ಕ್ರೀಂ ಮತ್ತು ಐಸ್-ಫ್ರೂಟ್‌ಗಳನ್ನು ಸೇರಿಸತಕ್ಕಂಥಾದ್ದು ಅಷ್ಟು ಸೂಕ್ತವಾದುದಲ್ಲ. ಐಸ್, ಐಸ್-ಕ್ಯಾಂಡಿ, ಐಸ್-ಕ್ರೀಂ ವ್ಯಾಪಾರ ಇಡೀ ವರ್ಷವೆಲ್ಲಾ ಇರುವುದಿಲ್ಲ, ಇದು ಒಂದು ಸಣ್ಣ ವ್ಯಾಪಾರ ಇದು ಸಣ್ಣ ಕುಟುಂಬಗಳು, ಗೃಹಕೈಗಾರಿಕಾ ರೀತಿಯಲ್ಲಿ ನಡೆಸತಕ್ಕ ಒಂದು ಸಣ್ಣ ವ್ಯಾಪಾರವಾಗಿರುವುದರಿಂದ ಇದನ್ನು ಮನ್ನಾ ಮಾಡಬೇಕು ಎಂಬತಕ್ಕಂಥ ನನ್ನ ಅಭಿಪ್ರಾಯವನ್ನು ಸೂಚಿಸುವುದಕ್ಕೆ ಇಚ್ಛೆಪಡುತ್ತೇನೆ. ೨೫ ಕಾಲಂ ೨ನೆಲ್ಲಿ ಇರತಕ್ಕ ಖಾದಿ ಆರ್ಟಿಕಲ್ಸ್, ಸ್ಯಾಂಡಲ್‌ವುಡ್ ಆರ್ಟಿ ಕಲ್ಸ್ ದೊಡ್ಡ ದೊಡ್ಡ ಪ್ರಮಾಣದಲ್ಲಿ ಮಾರಾಟವಾಗತಕ್ಕದ್ದೇನಲ್ಲ. ಕರ್ನಾಟಕದ ಕೆಲವು ಭಾಗಗಳಲ್ಲಿ ಇದನ್ನು ಗೃಹಕೈಗಾರಿಕೆಗಳಲ್ಲಿ ನಡಸುತ್ತಿದ್ದಾರೆ. ಗೃಹಕೈಗಾರಿಕೆಗಳಿಂದ ಹೊರಗೆ ಬರುವಂಥ ಈ ಆರ್ಟಿಕಲ್ಸ್ ಮೇಲೆ ತೆರಿಗೆ ಹಾಕಿದರೆ ಅವರು ಬಹಳ ತೊಂದರೆಗೆ, ಕಷ್ಟಕ್ಕೆ ಗುರಿಯಾಗುತ್ತಾರೆ. ಈ ರೀತಿ ನೀವು ತೆರಿಗೆ ಹಾಕಿದರೆ ಗೃಹ ಕೈಗಾರಿಕೆಗಳಲ್ಲಿ ಕೆಲಸ ಮಾಡುವವರಿಗೆ ಕೂಲಿ ಕೂಡ ಸಿಕ್ಕುವುದಿಲ್ಲ. ಆದರೆ ದೊಡ್ಡ ವ್ಯಾಪಾರ ಮಾಡತಕ್ಕವರಿಗೆ, ವಿದೇಶಗಳಿಗೆ ಕಳಿಸತಕ್ಕವರಿಗೆ ತೆರಿಗೆ ಹಾಕಿದರೆ ಪರ್ವಾಗಿಲ್ಲ. ಆದರೆ ಗೃಹಕೈಗಾರಿಕೆಗಳಲ್ಲಿ ಕೆಲಸಮಾಡತಕ್ಕವರಿಗೆ ತೆರಿಗೆಯನ್ನು ಹಾಕಿದರೆ ಅವರಿಗೆ ಬಹಳ ತೊಂದರೆ ಯಾಗುತ್ತದೆ. ಆದುದರಿಂದ ಅವರಿಗೆ ತೊಂದರೆಯಾಗದ ರೀತಿ ತಾವು ತೆರಿಗೆಯನ್ನು ಮನ್ನಾ ಮಾಡ ಬೇಕು ಎಂದು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಫರ್ನೀಚರ್ಸ್‌ಗೆ ಟ್ಯಾಕ್ಸ್‌ನ್ನು ಹಾಕಿದ್ದು ಸರಿಯಾದರೂ ಕೂಡ ವುಡನ್ ಫರ್ನೀಚರ್ಸ್‌ಗೆ ಬೇಕಾದಂಥ ಅಕ್ಸಸರಿಸ್‌ಗೂ ಕೂಡ ತೆರಿಗೆಯನ್ನು ಹಾಕಿರುವುದು ಸರಿಯಲ್ಲವೆಂದು ಹೇಳುತ್ತೇನೆ.

ಇನ್ನು ಷೆಡ್ಯೂಲ್ ೨೯ರಲ್ಲಿ ಮ್ಯೂಸಿಕಲ್ ಇನ್‌ಸ್ಟ್ರುಮೆಂಟ್ಸ್ ಮೇಲೂ ಕೂಡ ೮ ಪರ್ಸೆಂಟ್ ಟ್ಯಾಕ್ಸ್‌ನ್ನು ಹಾಕಿರತಕ್ಕಂಥಾದ್ದು ಸರಿಯಾಗಿ ಕಾಣುವುದಿಲ್ಲ. ಏತಕ್ಕೆಂದರೆ, ವೀಣೆ ಮತ್ತು ಇದಕ್ಕೆ ಸಂಬಂಧಪಟ್ಟ ತಂತಿ ಮುಂತಾದುವುಗಳನ್ನು ತಯಾರು ಮಾಡತಕ್ಕಂಥಾದ್ದು ಕೇವಲ ಸಣ್ಣ ಉದ್ಯಮವಾಗಿರುತ್ತದೆ. ಇದರ ಮೇಲೆ ತೆರಿಗೆಯನ್ನು ಹಾಕಿದರೆ ಹೆಚ್ಚು ಗೃಹ ಕೈಗಾರಿಕೆಗೆ ಆತಂಕ ಬರುತ್ತದೆ. ಆದ್ದರಿಂದ ಇದರ ಮೇಲೆ ಹಾಕಿರುವ ಟ್ಯಾಕ್ಸ್ ಕಡಿಮೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಷೆಡ್ಯೂಲ್ ೩೦ರಲ್ಲಿ ೧೧೯ (ಎ)ನಲ್ಲಿ ಗ್ಯಾಸ್ ಸ್ಟೌ ಮತ್ತು ಕೆರೋಸಿನ್ ಸ್ಟೌಗಳ ಮೇಲೂ ಟ್ಯಾಕ್ಸ್‌ನ್ನು ಹಾಕಿರುತ್ತೀರಿ, ಗ್ಯಾಸ್ ಸ್ಟೌ ಮೇಲೆ ಟ್ಯಾಕ್ಸ್ ಹಾಕತಕ್ಕಂಥಾದ್ದು ಸರಿಯಿದ್ದರೂ ಕೆರೋಸಿನ್ ಸ್ಟೌ ಮೇಲೆ ಹಾಕಿರತಕ್ಕಂಥಾದ್ದು ಸರಿಯಲ್ಲ. ಇದರ ಉತ್ಪಾದನೆ ತುಂಬಾ ಸಣ್ಣ ಪ್ರಮಾ ಣದ್ದು ಇರುತ್ತದೆ. ಸೌದೆ ಮತ್ತು ಕೋಲ್ ಸಿಕ್ಕದೆ ಇರತಕ್ಕಂಥ ಕಾಲದಲ್ಲಿ ಹೆಚ್ಚಿಗೆ ಕೆರೋಸಿನ್ ಉಪಯೋಗಿಸತಕ್ಕಂಥಾದ್ದು ಇರುತ್ತದೆ. ಕೆರೋಸಿನ್ ಸ್ಟೌಗೆ ಬೇಕಾದಂಥ ಸ್ಪೇರ್ ಪಾರ್ಟ್ಸ್ ಉಪಯೋ ಗಿಸತಕ್ಕಂಥಾದ್ದು ಕೂಡ ಕಡಿಮೆ ಇರುತ್ತದೆ. ಮತ್ತು ಇದನ್ನು ಹೆಚ್ಚಿಗೆ ಉಪಯೋಗಿಸತಕ್ಕವಂಥವರೂ ಕೂಡ ಮಧ್ಯಮವರ್ಗದ ಜನರೇ ಆಗಿರುವುದರಿಂದ ಅವರ ಮೇಲೆ ಹೆಚ್ಚಿನ ಹೊರೆ ಹೊರಿಸಿದಂತಾಗುತ್ತದೆ ಆದ್ದರಿಂದ ಇದರ ಮೇಲೆ ಹಾಕಿರುವ ಟ್ಯಾಕ್ಸ್ ಹೆಚ್ಚು ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಇನ್ನು ಷೆಡ್ಯೂಲ್ ೩ರಲ್ಲಿ ಎಲ್ಲ ತರದ ಪೇಪರ್ಸ್ ಎಂದರೆ ಕಾರ್ಬನ್ ಪೇಪರ್ ಸೇರಿ ಕೊಯೆಟೆಡ್, ಫೆರೊ ಪೇಪರ್ ಸ್ಟೆನ್‌ಸಿಲ್ ಪೇಪರ್, ಅಮೋನಿಯಾ ಪೇಪರ್ – ಇವೆಲ್ಲ ದೊಡ್ಡ ಕೈಗಾರಿಕೆಗಳಲ್ಲಿ ತಯಾರಾಗತಕ್ಕಂಥ ಪೇಪರ್‌ಗಳಾಗಿರುವುದರಿಂದ ಇವುಗಳ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿರುವುದು ಸರಿಯಾದುದಾದರೂ ಖಾದಿ ಬೋರ್ಡ್‌ನಲ್ಲಿ ತಯಾರಾಗತಕ್ಕಂಥ ವಸ್ತುಗಳ ಮೇಲೂ ಟ್ಯಾಕ್ಸ್‌ನ್ನು ಜಾಸ್ತಿ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ. ಖಾದಿ ಬೋರ್ಡ್‌ಗೆ ಸರ್ಕಾರದಿಂದ ಎಲ್ಲಾ ವಿಧವಾದ ಪ್ರೋತ್ಸಾಹ ಕೊಟ್ಟು ಅಭಿವೃದ್ಧಿಯನ್ನು ಮಾಡುತ್ತಿರುವ ಸಂದರ್ಭದಲ್ಲಿ ಅಲ್ಲಿ ತಯಾರು ಮಾಡತಕ್ಕಂಥ ವಸ್ತುಗಳ ಮೇಲೆ ೪ ಪರ್ಸೆಂಟರಷ್ಟು ಟ್ಯಾಕ್ಸ್‌ನ್ನು ಹಾಕುತ್ತಿರುವಿರಿ. ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಗೃಹಕೈಗಾರಿಕೆಗಳಿಗೆ ಬೆಂಬಲವನ್ನು ಕೊಡತಕ್ಕಂಥ ಖಾದಿ ಬೋರ್ಡ್‌ಗೆ ರಾಷ್ಟ್ರಮಟ್ಟದಲ್ಲಿ ಪರಿಹಾರ ಕೊಡತಕ್ಕಂಥಾ ಖಾದಿ ಬೋರ್ಡ್‌ನಲ್ಲಿ ತಯಾರಾಗತಕ್ಕಂಥ ವಸ್ತುಗಳ ಮೇಲೂ ಕೂಡ ಟ್ಯಾಕ್ಸ್ ಹಾಕಿರುತ್ತೀರಿ. ಖಾದಿ ಬೋರ್ಡ್‌ನಲ್ಲಿ ತಯಾರಾಗತಕ್ಕಂಥ ಇನ್ನೂ ಅನೇಕ ಅಂಶಗಳ ಮೇಲೆ ಅಂದರೆ ಕೊಟ್ಟಣದ ಅಕ್ಕಿ, ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯ ಜನರು ಉಪಯೋಗಿಸತಕ್ಕಂಥ ಆಹಾರಧಾನ್ಯಗಳಾದ ರಾಗಿ ಜೋಳ ಇತ್ಯಾದಿಗಳ ಮೇಲೂ ೪ ಪರ್ಸೆಂಟ್ ತೆರಿಗೆಯನ್ನು ಹಾಕಿರುತ್ತೀರಿ. ಈ ರೀತಿ ತೆರಿಗೆಯನ್ನು ಹಾಕುತ್ತಿರುವುದರಿಂದ ಗ್ರಾಮ ಉದ್ಯೋಗಗಳಿಗೆ ಪ್ರೋತ್ಸಾಹ ಕೊಡುವುದಕ್ಕೆ ಬದಲಾಗಿ ತೊಂದರೆಯಾಗುತ್ತದೆಂದು ಹೇಳುತ್ತೇನೆ. ಆದುದರಿಂದ ಖಾದಿ ಗ್ರಾಮೋದ್ಯೋಗದಲ್ಲಿ ಉತ್ಪತ್ತಿಯಾಗತಕ್ಕಂಥ ಮತ್ತು ಮಾರಾಟವಾಗತಕ್ಕಂಥ ವಸ್ತುಗಳ ಮೇಲೆ ಮಾರಾಟ ತೆರಿಗೆಯನ್ನು ವಿಧಿಸದೆ, ವಿನಾಯತಿಯನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಸಾಮಾನ್ಯ ಜನರು ಉಪಯೋಗಿಸತಕ್ಕಂಥ ರಾಗಿ, ಜೋಳ ಬಾಜ್ರ–ಇಂಥಾದ್ದರ ಮೇಲೆ ಹಿನ್ನು ೪ ಪರ್ಸೆಂಟ್ ತೆರಿಗೆಯನ್ನು ಹಾಕಿರುತ್ತೀರಿ, ಇದನ್ನು ರದ್ದು ಮಾಡಬೇಕೆಂದು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಇನ್ನು ಷೆಡ್ಯೂಲ್ ೩೫ (೧೪೨)ರಲ್ಲಿ ಆಲ್ ಕೈಂಡ್ಸ್ ಆಫ್ ಇಂಕ್ಸ್–ಇದರ ಮೇಲೆ ೮ ಪರ್ಸೆಂಟ್ ಟ್ಯಾಕ್ಸ್‌ನ್ನು ಹಾಕಿರುವುದರಿಂದ ಶಾಲಾ ಕಾಲೇಜುಗಳಲ್ಲಿ ಮತ್ತು ಮುದ್ರಣಕ್ಕಾಗಿ ಉಪಯೋಗಿಸತಕ್ಕಂಥ ಇಂಕ್ ಜೊತೆಗೆ ಕಾಗದದ ಮೇಲೆ ತೆರಿಗೆ ಜಾಸ್ತಿಯಾಗುವುದರಿಂದ ಶಾಲೆಗಳಲ್ಲಿ ಓದತಕ್ಕಂಥ ಮಕ್ಕಳ ಮೇಲೆ ಹೆಚ್ಚಿನ ಪರಿಣಾಮವಾಗುತ್ತದೆ. ಆದ್ದರಿಂದ ಇದರಮೇಲೆ ಹಾಕಿರತಕ್ಕಂಥ ೮ ಪರ್ಸೆಂಟ್ ತೆರಿಗೆಯಿಂದ ನಾಲ್ಕು ಪರ್ಸೆಂಟ್‌ಗೆ ಇಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಷೆಡ್ಯೂಲ್ ೩ (೧೩ ಎ) ಪ್ಲಾವನ್ಸ್, ಶ್ರಿಮ್ಸ್ ಇವುಗಳ ಮೇಲೆ ತೆರಿಗೆಯನ್ನು ಹಾಕಿರುವುದು ಸ್ವಾಗತಾರ್ಹವಾದುದಾಗಿರುತ್ತದೆ. ಏಕೆಂದರೆ, ವಿಧಿನಿಯಮದ ಪ್ರಕಾರ ಇವುಗಳಿಂದ ಸಂಪಾದನೆಯಾಗುವುದು ಇರುತ್ತದೆ. ಆದರೆ ಮೂಲತಃ ಖಾದಿ ಬೋರ್ಡನಲ್ಲಿ ಉತ್ಪನ್ನವಾಗತಕ್ಕಂಥ ಮತ್ತು ಮಾರಾಟವಾಗತಕ್ಕಂಥ ಅಂಶಗಳಿಗೆ ತೆರಿಗೆಯಿಂದ ವಿನಾಯತಿಯನ್ನು ಕೊಡಬೇಕೆಂದು ಹೇಳುತ್ತೇನೆ. ಉಳಿದ ಅಂಶಗಳಿಗೆ ತೆರಿಗೆಯನ್ನು ಹಾಕಿರುವುದು ಸ್ವಾಗತಾರ್ಹವಾದುದಾಗಿರುತ್ತದೆ. ಖಾದಿ ಬೋರ್ಡ್‌ನಿಂದ ತಯಾರಾಗತಕ್ಕಂಥ ಅಂಶಗಳ ಮೇಲೆ ತೆರಿಗೆ ವಿನಾಯತಿಯನ್ನು ಮಾಡಿದರೆ ಬಹುತಃ ೧೦–೧೨ ಲಕ್ಷ ರೂಪಾಯಿ ಆದಾಯ ಕಡಿಮೆಯಾಗಬಹುದು. ಎಂದು ಹೇಳಿ ನನ್ನ ಮಾತನ್ನು ಮುಂಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಬಸವನಗುಡಿ).—ಮಾನ್ಯ ಸಭಾಪತಿಗಳೇ, ಇಂದು ನಮ್ಮ ಮುಂದೆ ಮಂಡಿಸಿರತಕ್ಕಂಥ ಈ ಸೇಲ್ಸ್‌ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ಲನ್ನು ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ. ಮೊದಲನೆಯದಾಗಿ, ಈ ಸೇಲ್ಸ್‌ಟ್ಯಾಕ್ಸ್‌ನ್ನು ಹಾಕಿರತಕ್ಕಂಥಾದ್ದು ಒಂದು ವಿಧದಲ್ಲಿ ಡೈರೆಕ್ಟ್ ಟ್ಯಾಕ್ಸ್ ಅಲ್ಲದಿದ್ದರೂ ಕೂಡ ಇದು ಮೂಲತಃ ಇನ್‌ಡೈರೆಕ್ಟ್ ಟ್ಯಾಕ್ಸ್ ಹಾಕಿರತಕ್ಕಂಥಾದ್ದಾಗಿರುತ್ತದೆ. ಈ ಸದನದಲ್ಲಿ ವರ್ಷೇ ವರ್ಷೇ ಟ್ಯಾಕ್ಸ್‌ನ್ನು ಹೆಚ್ಚಿಸಿಕೊಂಡು ಹೋಗುತ್ತಾ ಇರತಕ್ಕಂಥಾದನ್ನು ನೋಡಿದರೆ ಟ್ಯಾಕ್ಸ್‌ನ್ನು ಹಾಕತಕ್ಕಂಥ ಅಭಿಪ್ರಾಯಕ್ಕೆ ಸ್ವಲ್ಪ ವಿರುದ್ಧವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಈ ಸೇಲ್ಸ್‌ಟ್ಯಾಕ್ಸ್ ಹಾಕತಕ್ಕಂಥ ವಿಧಾನವನ್ನು ಹೇಳುವುದಾದರೆ, ನಾನು ಈ ಅಸೆಂಬ್ಲಿಗೆ ಚುನಾಯಿತನಾಗಿ ಬಂದು ಹನ್ನೊಂದು ವರ್ಷಗಳಾಯಿತು. ಆಗ ಸೇಲ್ಸ್‌ಟ್ಯಾಕ್ಸ್ ಕೇವಲ ೩೦ ಕೋಟಿ ರೂಪಾಯಿಗಳು ಮಾತ್ರ ಇತ್ತು. ಈವತ್ತಿನದಿವಸ ಅದು ೧೫೦ ಕೋಟಿ ರೂಪಾಯಿಗಳ ವರೆಗೆ ಹೆಚ್ಚಿಗೆ. ತೆರಿಗೆ, ಸೇಲ್ಸ್‌ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್‌ನಿಂದ ೨೪೭ ಲಕ್ಷ ರೂಪಾಯಿಗಳು ಹೆಚ್ಚು ವರಿ ಬರುತ್ತದೆ ಎಂದೂ ಹೇಳಿದರೂ ಕೂಡ ಜನರ ಮೇಲೆ ಹೆಚ್ಚು ಹೊರೆಯನ್ನು ಹಾಕದಂತಾಗುತ್ತದೆ ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗಿತ್ತು ಎಂದು ಹೇಳುತ್ತೇನೆ. ಅವರು ಕೊಡತಕ್ಕಂಥ ಅಂಶ

ನ್ಯಾಯವಾಗಿರುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕಾಗಿತ್ತು. ಒಂದು ಕಡೆ ಸರ್ಕಾರದವರು ಮಿತಿಯಿಲ್ಲದೆ ಖರ್ಚು ಮಾಡುತ್ತಾ ಇರುವುದು, ಇನ್ನೊಂದು ಕಡೆ ಈಗ ಏನು ಟ್ಯಾಕ್ಸ್ ಹಾಕಿರುತ್ತೀರಿ ಅದನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ವಸೂಲು ಮಾಡದೆ ಇರುವುದರಿಂದ ಸರ್ಕಾರಕ್ಕೆ ಬರತಕ್ಕಂಥ ಉತ್ಪತ್ತಿಯಲ್ಲಿ ಎಷ್ಟೋ ಭಾಗ ಕಡಿಮೆಯಾಗುತ್ತಾ ಇರುತ್ತದೆ. ಆದ್ದರಿಂದ ನ್ಯಾಯವಾಗಿ ಖರ್ಚು ಮಾಡತಕ್ಕಂಥಾದ್ದಕ್ಕೆ ಖರ್ಚುಮಾಡಿ ಸೇಲ್ಸ್‌ಟ್ಯಾಕ್ಸ್ ವಸೂಲಾತಿ ಕ್ರಮವನ್ನು ಸ್ವಲ್ಪಮಟ್ಟಿಗೆ ಬಿಗಿ ಮಾಡಿದರೆ ಮತ್ತೆ ಮತ್ತೆ ಹೆಚ್ಚುವರಿ ಸೇಲ್ಸ್‌ಟ್ಯಾಕ್ಸ್‌ನ್ನು ಹಾಕತಕ್ಕಂಥಾದ್ದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಈಗಿರತಕ್ಕಂಥ ವರಮಾನ ಸುಮಾರು ೧೦ ಪರ್ಸೆಂಟ್ ೨೦ ಪರ್ಸೆಂಟ್ ರಷ್ಟು ಹೆಚ್ಚಿಗೆ ಬರುವುದಕ್ಕೂ ಅವಕಾಶವಾಗುತ್ತದೆಂದು ಹೇಳುತ್ತೇನೆ. ಪ್ರತಿಯೊಂದಕ್ಕೂ ಕೂಡ ಹೊಸ ಹೊಸದಾಗಿ ತೆರಿಗೆಯನ್ನು ಹಾಕುತ್ತಾ ಹೋಗುವುದರಿಂದ ಸೇಲ್ಸ್ ಟ್ಯಾಕ್ಸ್ ಆಫೀಸರಂಗಳು ಹೋದವರ್ಷ ಇಷ್ಟು ಇತ್ತು, ಇಷ್ಟು ಆದಾಯ ಬಂದಿತು, ಈ ವರ್ಷ ಇಷ್ಟು ಜಾಸ್ತಿಯಾಯಿತು ಎಂದು ತೋರಿಸುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಪ್ರತಿವರ್ಷವೂ ಹೊಸದಾಗಿ ಈ ರೀತಿ ಟ್ಯಾಕ್ಸ್‌ನ್ನು ಹಾಕುತ್ತಾ ಹೋಗುತ್ತಿರುವುದರಿಂದ ಕಲೆಕ್ಟ್ ಮಾಡುವುದಕ್ಕೆ ಒಂದು ರೀತಿಯಲ್ಲಿ ಕಷ್ಟವಾಗುತ್ತದೆ, ಮತ್ತು ನಮ್ಮ ಆರ್ಥಸಚಿವರು ಈ ಮಸೂದೆಯನ್ನು ಮಂಡಿಸುವಾಗ ನೆರೆ ರಾಜ್ಯದಲ್ಲಿ ಟ್ಯಾಕ್ಸ್ ಹೆಚ್ಚಾಗಿದೆ, ಆದರ ಮಟ್ಟಕ್ಕೆ ತರಬೇಕು ಎನ್ನುವ ಉದ್ದೇಶ ಹೇಳಿದ್ದಾರೆ. ಆದರೆ ಒಂದು ಮಾತನ್ನು ಮಾತ್ರ ಒಪ್ಪಿಕೊಳ್ಳಬೇಕಾದ ವಿಚಾರ ಆಗಿರುತ್ತದೆ. ಬೇರೆ ಕಡೆ ಕಡಿಮೆ ಇದ್ದು ನಮ್ಮಲ್ಲಿ ಜಾಸ್ತಿ ಇದ್ದರೆ ಆಗ ಆದು ವ್ಯಾಪಾರದ ಮೇಲೆ ಡೈವರ್ಸ್ ಆಗುತ್ತದೆಂದು ಹೇಳಿದರು. ನಾನು ಹೇಳುವುದು ಏನೆಂದರೆ, ಬೇಕೆ ಕಡೆ ಹೆಚ್ಚಾಗಿ ಇರುವುದರಿಂದ ನಾವು ಹೆಚ್ಚು ಮಾಡಬೇಕು ಎನ್ನುವುದು ಸರಿಯಾಗಿ ಕಾಣುವುದಿಲ್ಲ. ಬೇರೆ ಕಡೆ ಹೆಚ್ಚು ಇರುವುದರಿಂದ ಇಲ್ಲೂ ಹೆಚ್ಚು ಮಾಡಬೇಕು ಎನ್ನುವಂತೆ ಬೇರೆ ಕಡೆ ಕಡಿಮೆ ಇದ್ದರೆ ಇಲ್ಲೂ ಕೂಡ ಕಡಿಮೆ ಮಾಡಬೇಕು ಎನ್ನುವುದರ ಯೋಚನೆ ಬಗ್ಗೆ ಮಾಡುವುದಿಲ್ಲ. ತಮಿಳುನಾಡಿನಲ್ಲಿ ಫುಡ್‌ಗ್ರೈನ್ಸ್ ಮೇಲೆ ತೆರಿಗೆಯನ್ನು ಹಾಕಿಲ್ಲ. ನಮ್ಮಲ್ಲಿ ಏತಕ್ಕೆ ಫುಡ್ ಗ್ರೈನ್ಸ್ ಮೇಲೆ ತೆರಿಗೆಯನ್ನು ಹಾಕಿರುತ್ತೀರಿ ಎಂದು ಕೇಳಬೇಕಾಗಿದೆ. ಇದನ್ನು ತೆಗೆಯಬೇಕೆಂದು ಅನೇಕ ಸಾರಿ ಈ ಮನೆಯಲ್ಲಿ ಒತ್ತಾಯ ತಂದಿದ್ದರೂ ಕೂಡ ಇಲ್ಲಿಯವರೆಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಈ ರೀತಿ ಪ್ರತಿವರ್ಷ ಇಂಟರ್‌ನಲ್ ಟ್ಯಾಕ್ಸ್ ಹಾಕುತ್ತಾ ಇರುವುದು ಸೂಕ್ತವಲ್ಲವೆಂದು ಹೇಳುತ್ತೇನೆ. ಮತ್ತೆ ಮಲ್ಟಿಪಾಯಿಂಟ್ ಇರುವುದನ್ನು ಸಿಂಗಲ್ ಪಾಯಿಂಟ್ ಮಾಡಬೇಕೆಂದು ಅನೇಕ ಸಂದರ್ಭಗಳಲ್ಲಿ ಈ ಮನೆಯಲ್ಲಿ ಒತ್ತಾಯ ಮಾಡಿದ್ದರಿಂದ ಕೆಲವೊಂದು ವಸ್ತುಗಳಿಗೆ ಸಿಂಗಲ್‌ಪಾಯಿಂಟ್ ಮಾಡಿದ್ದೀರಿ, ಸಂತೋಷ. ಆದರೆ, ಸಿಂಗಲ್‌ಪಾಯಿಂಟ್ ಮಾಡುತ್ತೇವೆಂದು ಹೇಳಿ ೫ ಪರ್ಸೆಂಟ್ ಇದ್ದುದನ್ನು ೪ ಪರ್ಸೆಂಟ್ ಮಾಡಿದ್ದೀರಿ ಅಷ್ಟೇ.

ಮಲ್ಟಿ ಪಾಯಿಂಟ್ ಟ್ಯಾಕ್ಸ್ ಇದ್ದುದನ್ನು ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಮಾಡಿ ಆದರ ಮೇಲೆ ೪ ಪರ್ಸೆಂಟ್ ಮಾಡಿರುವುದರಿಂದ ನಿಜವಾಗಲೂ ಕೂಡ ಸೇಲ್ಸ್ ಟ್ಯಾಕ್ಸ್ ಜಾಸ್ತಿಯಾಗಿದೆ ಎಂದು ಹೇಳುತ್ತೇನೆ. ನಾವು ಅನೇಕ ಸಂದರ್ಭಗಳಲ್ಲಿ ಈ ಆಕ್ಟ್ರಾಯಿಯನ್ನು ತೆಗೆಯಬೇಕು ಎಂದು ಹೇಳುತ್ತಾ ಇರುವಾಗ ಪ್ರತಿ ವರ್ಷವೂ ಕೂಡ ನೀವು ಸೇಲ್ಸ್ ಟ್ಯಾಕ್ಸ್ ಅನ್ನು ಹೆಚ್ಚಿಸುತ್ತಿದ್ದೀರಿ. ಹೀಗೆ ಮಾಡುವ ಬದಲು ಈ ಆಕ್ಟ್ರಾಯಿನಿಂದ ಏನು ವರಮಾನ ಬರುತ್ತದೋ ಆ ವರಮಾನವನ್ನು ವಸೂಲ್ಮಾಡುವುದಕ್ಕೆ ಇದಕ್ಕೇನೇ ಒಂದಿಷ್ಟು ಪರ್ಸೆಂಟ್ ಅಂತ ಎನಾದರೂ ಹಾಕಿ ಅಥವಾ ಒಂದು ಸೆಸ್ ಹಾಕಿ ವಸೂಲ್ಮಾಡಿದರೆ ಇದರಿಂದ ೨-೩ ಕೋಟಿ ರೂಪಾಯಿ ಟ್ಯಾಕ್ಸ್ ಏನು ಬರುತ್ತದೆ ಅದನ್ನು ವಸೂಲ್ಮಾಡುವುದು ತಪ್ಪುತ್ತದೆ ಮತ್ತು ಆ ಜನರು ಇದರಿಂದ ತಪ್ಪಿಸಿಕೊಳ್ಳುವುದಕ್ಕೂ ಕೂಡ ಬಹಳ ಕಷ್ಟವಾಗುತ್ತದೆ. ಈವೊತ್ತಿನ ದಿವಸ ಸರ್ಕಾರದವರು ಇದರ ಬಗ್ಗೆ ಯೋಚನೆ ಮಾಡಿ ತಮಗೆ ಯಾವುದು ರೀಸನಬಲ್ ಅಂತ ಕಾಣುತ್ತದೋ ಅದರಂತೆ ಮಾಡಿ ಈ ಸೇಲ್ಸ್ ಟ್ಯಾಕ್ಸ್ ಮೇಲೆನೇ ಒಂದಷ್ಟು ಸೆಸ್ ಅಂತ ಹಾಕಿ ಈ ಆಕ್ಟ್ರಾಯಿಯನ್ನು ತಪ್ಪಿಸುವುದಕ್ಕೆ ಯೋಚನೆ ಮಾಡಬೇಕು ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

೧೧-೩೦ ಎ ಎಂ.

ಇನ್ನು ಈ ಸೇಲ್ಸ್ ಟ್ಯಾಕ್ಸ್ ಬಗ್ಗೆ ತಾವು ಏನು ತೆಗೆದು ಹಾಕುತ್ತೀರಿ ಆ ಟ್ಯಾಕ್ಸ್‌ನ್ನು ಯಾರೂ ಕೊಡುವುದಿಲ್ಲ, ನಾನು ಮೊದಲೂ ಕೂಡ ಈ ಬಗ್ಗೆ ಮಾತನಾಡಿದ್ದೇನೆ. ಅದು ಹೇಗೆಂದರೆ, ನಾನು ಹಿಂದೆ ಹೇಳಿದ ಹಾಗೆ ಅನೇಕ ಅಂಗಡಿಗಳವರು ಎರಡು ಲೆಕ್ಕದ ಪುಸ್ತಕಗಳನ್ನು ಇಡುತ್ತಾರೆ. ಒಂದು

ರಾಮನ ಲೆಕ್ಕ ಇನ್ನೊಂದು ಕೃಷ್ಣನ ಲೆಕ್ಕ. ಬಿಲ್ ಬರೆದು ಗಿರಾಕಿಗಳಿಗೆ ಕೊಡುವುದು ಒಂದು ಲೆಕ್ಕ ವಾದರೆ, ಭಾನುವಾರ ದಿವಸ ಅವರು ಮನೆಗಳಲ್ಲಿ ಕುಳಿತುಕೊಂಡು ಅವರೇ ಒಂದು ರೀತಿಯನ್ನು ಸೃಷ್ಟಿಸಿಕೊಂಡು ಪುಸ್ತಕದಲ್ಲಿ ಬರೆಯುವುದು ಒಂದು ಲೆಕ್ಕವಾಗಿರುತ್ತದೆ. ಈ ರೀತಿ ಮಾಡಿ ಲೆಕ್ಕ ಬರೆಯುವುದರಿಂದ ಅಂಥಾದಕ್ಕೆ ಯಾವ ಸೇಲ್ಸ್ ಟ್ಯಾಕ್ಸ್ ಕೂಡ ಬರುವುದಿಲ್ಲ. ಅಷ್ಟೇ ಅಲ್ಲದೆ, ಅದಕ್ಕೆ ಇನ್‌ಕಂ ಟ್ಯಾಕ್ಸ್ ಕೂಡ ಬರುವುದಿಲ್ಲ. ಇದರಲ್ಲಿ ಈ ರೀತಿಯ ಬಹಳ ಲೋಪ ಇದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದೇನೆಂದರೆ ಅವರ ಒರಿಜಿನಲ್ ಇನ್‌ವಾಯಿಸ್‌ಅನ್ನು ತರಿಸಿಕೊಂಡು ನೋಡಿ ಅವನು ಮಾರ್ಕೆಟ್‌ನಲ್ಲಿ ಎಷ್ಟು ಪರ್ಚೇಸ್ ಮಾಡಿದ್ದಾರೆ, ಮತ್ತು ತಾನು ಎಷ್ಟು ಮಾರಿದ್ದಾನೆ ಮತ್ತು ಮಾರಾಟವಾದ ಸಾಮಾನುಗಳಿಗೆ ಸರಿಯಾದ ರೀತಿಯಲ್ಲಿ ಟ್ಯಾಕ್ಸ್ ಬರುತ್ತದೆಯೇ ಅನ್ನುವುದನ್ನು ಸ್ವಲ್ಪ ಯೋಚನೆ ಮಾಡಿ ಮತ್ತು ಯಾವ ಯಾವ ರೀತಿಯಲ್ಲಿ ಅವನಿಂದ ಟ್ಯಾಕ್ಸ್ ಬರುವುದು ತಪ್ಪಿದೆ ಅನ್ನುವುದನ್ನು ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಈ ಲೀಕೇಜ್‌ನಿಂದ ಎಷ್ಟು ಸೋರಿಹೋಗುತ್ತದೆ ಅನ್ನುವುದನ್ನು ಕಂಡುಹಿಡಿಯುವುದು ಬಹಳ ಕಷ್ಟ. ತಾವು ಪ್ರತಿವರ್ಷವೂ ಟ್ಯಾಕ್ಸ್ ಹಾಕುತ್ತಿದ್ದೀರಿ. ಇದರಿಂದ ಸಾಮಾನುಗಳ ಬೆಲೆ ಜಾಸ್ತಿಯಾಗುತ್ತಾ ಇದೆ. ಪ್ರತಿ ವರ್ಷವೂ ಈ ಸೇಲ್ಸ್ ಟ್ಯಾಕ್ಸ್‌ನಿಂದ ಸುಮಾರು ೧೦-೧೫ ಕೋಟಿ ರೂಪಾಯಿಗಳು ಜಾಸ್ತಿ ಬರುತ್ತಾ ಇದೆ. ಇಷ್ಟೊಂದು ಹೆಚ್ಚು ಟ್ಯಾಕ್ಸ್‌ನ್ನು ಜನಗಳು ಕೊಡುತ್ತಾ ಇದ್ದಾರೆ. ಆದುದರಿಂದ ನಾನು ಹೇಳುವುದು ಏನೆಂದರೆ, ಎಲ್ಲಿ ಇದು ಲೀಕೇಜ್ ಆಗುತ್ತದೋ ಅದನ್ನು ಕಂಡುಹಿಡಿಯುವುದರ ಬದಲು ಪ್ರತಿವರ್ಷವೂ ಕೂಡ ಈ ಟ್ಯಾಕ್ಸ್ ಅನ್ನು ಏರಿಸಿಕೊಂಡು ಹೋಗುತ್ತಾ ಇರುವುದು ಅಷ್ಟು ಸರಿಯಾದುದಲ್ಲ ಎಂದು ಹೇಳುತ್ತೇನೆ.

ಇನ್ನು ಸೂಯಿಂಗ್ ಥ್ರೆಡ್ ಮೇಲೆ ತೆರಿಗೆ ಹಾಕಿದ್ದೀರಿ. ಸಾಮಾನ್ಯವಾಗಿ ಇದರಲ್ಲಿ ಹೆಚ್ಚಿಗೆ ಲಾಭ ಮಾಡತಕ್ಕಂಥಾ ಜನ ಬಹಳ ಕಡಿಮೆ. ಇದರಲ್ಲಿ ನೂರಾರು ಜನ ಟೈಲರ್ಸ್ ಏನು ಕೆಲಸ ಮಾಡುತ್ತಿದ್ದಾರೆ ಅವರು ಬಡವರೇ ವಿನಾ ಅನುಕೂಲಸ್ಥರಲ್ಲ. ಆದುದರಿಂದ ಇದರ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕುವುದು ಅಷ್ಟು ಸೂಕ್ತ ಎಂದು ನನಗೆ ಕಾಣುವುದಿಲ್ಲ.

Madam Deputy Speaker in the Chair

ಇನ್ನು ಇದರಲ್ಲಿ ಆಲ್ ಲಿಕ್ಕರ್ಸ್ ಆದರ್ ದ್ಯಾನ್ ಕಂಟ್ರಿ ಲಿಕ್ಕರ್ಸ್ ಅಂತ ಹೇಳಿದ್ದೀರಿ. ಇದರಲ್ಲಿ ತಾವು ಏನು ಒಂದು ಟ್ಯಾಕ್ಸ್ ಹಾಕಿದ್ದೀರಿ. ಅದನ್ನು ಯೋಚನೆ ಮಾಡಬೇಕು. ಸಾಮಾನ್ಯವಾಗಿ ಹೆಂಡವನ್ನು ಕುಡಿಯುವವರು ಬಡವರೆ. ಒಂದು ಕಡೆ ಇದನ್ನು ಕುಡಿಯಬೇಡಿ ಎಂದು ಹೇಳುತ್ತಾ ಇರುವಾಗ ಇಂಥಾದರ ಮೇಲೆ ಏತಕ್ಕೆ ತೆರಿಗೆ ಹಾಕುತ್ತೀರಿ? ವೈನ್ ಕುಡಿಯುವವರಿಗೆ, ಬ್ರಾಂದಿ ಕುಡಿಯುವವರಿಗೆ ಎಷ್ಟು ಬೇಕಾದರೂ ಟ್ಯಾಕ್ಸ್ ಹಾಕಿ, ನಾನು ಅಡ್ಡಿ ಮಾಡುವುದಿಲ್ಲ. ಒಂದು ಕಡೆ ಹೆಂಡವನ್ನು ಕುಡಿಯಬೇಡಿ ಎಂಗು ಹೇಳಿ ಮತ್ತೊಂದು ಕಡೆ ಟ್ಯಾಕ್ಸ್ ಹಾಕುವುದು ಸರಿಯೇ ಇದನ್ನು ಸ್ವಲ್ಪ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಯಾರಾದರೂ ಇದರ ಬಗ್ಗೆ ಕೆಟ್ಟ ಚಟಗಳನ್ನು ಇಟ್ಟುಕೊಂಡಿದ್ದರೆ ಮತ್ತು ಬೆಚ್ಚು ಅನುಕೂಲಸ್ಥರು ಇದನ್ನು ಕುಡಿಯುವ ಹಾಗೆ ಇದ್ದರೆ ಇದನ್ನು ಒಂದು ಲಕ್ಸುರಿಯಸ್ ಎಂದು ತಿಳಿದುಕೊಂಡು ಅವರು ಉಪಯೋಗಿಸುತ್ತಾ ಇದ್ದರೆ ಅಂಥಾವರ ಮೇಲೆ ಎಷ್ಟು ಬೇಕಾದರೂ ತೆರಿಗೆ ಹಾಕಿ, ಅದಕ್ಕೆ ನಾನು ಅಡ್ಡಿ ಮಾಡುವುದಿಲ್ಲ.

ಇನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರಬೇಕಾಗಿದೆ. ಅದೇನೆಂದರೆ, ನಮ್ಮಲ್ಲಿ ಅನೇಕ ಬ್ರುವರೀಸ್‌ಗಳು ಇವೆ. ಈ ಬ್ರುವರೀಸ್‌ನಲ್ಲಿದ್ದ ಒಬ್ಬ ನಮ್ಮವನನ್ನು ಅವರು ತೆಗೆದು ಹಾಕಿದರು. ಆತ ಏನು ಹೇಳಿದ ಎಂದರೆ, ಈ ಎಕ್ಸೈಜ್ ಅಧಿಕಾರಿ ಅಲ್ಲೇ ಇದ್ದರೂ ಕೂಡ ತನಿಖೆ ಮಾಡದಂಥಾ ಹತ್ತಾರು ಕೇಸ್‌ಗಳು ಆ ಅಧಿಕಾರಿಗಳ ಲೆಕ್ಕಕ್ಕೆ ಬಾರದೇ ಇದ್ದ ಹಾಗೆ ಹೊರಗೆ ಹೋಗುತ್ತದೆ; ಎಂದು ಹೇಳಿದ. ಹೀಗೆ ಹತ್ತಾರು ಕೇಸ್‌ಗಳು ಹೊರಕ್ಕೆ ಹೋಗುವುದರಿಂದ ಅವುಗಳಿಗೆ ತೆರಿಗೆ ಕೊಡದೆ ಹೋಗುವ ಸಂದರ್ಭವೂ ಉಂಟು. ಈ ರೀತಿಯಾಗಿ ಬ್ರುವರೀಸ್‌ಗಳಲ್ಲಿ ಮಾಡುತ್ತಾ ಇರುವುದರಿಂದ ನಮಗೆ ಬರತಕ್ಕಂಥಾ ಕೋಟ್ಯಾಂತರ ರೂಪಾಯಿಗಳ ಆದಾಯ ಸರಿಯಾದ ರೀತಿಯಲ್ಲಿ ಬಾರದೇ ಈ ರೀತಿ ಹೋಗುತ್ತಾ ಇದೆ. ಆದುದರಿಂದ ನಾನು ಈ ಸಂಬರ್ಧದಲ್ಲಿ ತಮಗೆ ಹೇಳುವುದೇನೆಂದರೆ, ಈ ಲಿಕ್ಕರ್ಸ್ ಬಗ್ಗೆ ತಾವು ಸ್ವಲ್ಪ ಗಮನ ಕೊಟ್ಟು ತಮ್ಮ ಎಕ್ಸೈಜ್ ಅಧಿಕಾರಿಗಳು ಇದರ ಬಗ್ಗೆ ಗಮನ ಕೊಟ್ಟಿದ್ದಾರೆಯೇ ಇಲ್ಲವೇ ಅಂತ ತಿಳಿದು, ಈ ಎಕ್ಸೈಜ್ ಅಧಿಕಾರಿಗಳೊಂದಿಗೆ ಕಲೆತು ತಾವು

ಮಾತನಾಡಿ ಈ ಬಗ್ಗೆ ತಯಾರು ಮಾಡತಕ್ಕಂಥಾ ಸಾಮಾನುಗಳು ಸರಿಯಾದ ರೀತಿಯಲ್ಲಿ ಮಾರ್ಕೆಟ್‌ಗೆ ಬರುತ್ತದೆಯೇ ಇಲ್ಲವೇ ಅನ್ನುವುದನ್ನು ಪರಿಶೀಲನೆ ಮಾಡಬೇಕು. ಹಾಗೆ ಅವರು ಪರಿಶೀಲನೆ ಮಾಡಿದ ಪಕ್ಷದಲ್ಲಿ ಇದರಿಂದ ಇನ್ನೂ ಹೆಚ್ಚಿನ ಆದಾಯ ಬರುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ಚಕ್‌ಪೋಸ್ಟ್‌ಗಳ ಬಗ್ಗೆ ಹೇಳಬೇಕಾದರೆ, ಇದರಲ್ಲಿ ಸಾಕಷ್ಟು ಬಿಗಿ ಇಲ್ಲ ಎಂದು ಹೇಳುತ್ತೇನೆ. ತಮಗೆ ಹೇಳಬೇಕಾದರೆ, ಬೆಂಗಳೂರಿಗೆ ಹೊರಗಡೆಯಿಂದ ರಾತ್ರಿ ವೇಳೆ ಬರತಕ್ಕಂಥಾ ಲಾರಿಗಳ ಬಗ್ಗೆ ಆಕ್ಟ್ರಾಯಿಗೆ ಸಂಬಂಧಪಟ್ಟಂಥಾ ಉಕ್ಕಡಗಳು ಏನು ಇವೆ, ಅವೂ ಕೂಡ ಸಾಕಷ್ಟು ಒಂದು ಹದಕ್ಕೆ ಬಂದಿಲ್ಲ. ರಾತ್ರಿವೇಳೆ ಬರತಕ್ಕಂಥಾ ಲಾರಿಗಳಲ್ಲಿ ಅನೇಕ ಸಾಮಾನುಗಳಿಗೆ ಆಕ್ಟ್ರಾಯಿ ಕೊಡದೇ ಹಾಗೆ ಹೊರಟು ಹೋಗುತ್ತವೆ. ಆದುದರಿಂದ ಈ ಚೆಕ್‌ಪೋಸ್ಟ್‌ಗಳು ಏನು ಇವೆ ಇವುಗಳ ಮೇಲೆ ನೇರವಾದ ಒಂದು ವಿಜಿಲೆನ್ಸ್ ಇಟ್ಟು ಅವರ ಮುಖಾಂತರ ಇದನ್ನು ಚಕ್ ಮಾಡಿಸಿದರೆ ಇದರಿಂದ ಇನ್ನೂ ಹೆಚ್ಚಿನ ಆದಾಯ ಬರುತ್ತದೆ ಎಂದು ಹೇಳುತ್ತೇನೆ, ಇದನ್ನು ಕ್ಲಿಯರ್ ಆಗಿ ಅವರೇ ನೋಡಿದರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ.

ಇನ್ನು ಮೆಡಿಕಲ್ ಟ್ರೀಟ್‌ಮೆಂಟ್‌ಗೆ ಸಂಬಂಧಿಪಟ್ಟಂತೆ ಹೇಳಬೇಕಾದರೆ, ರೋಗಿಗಳಿಗೆ ಸಂಬಂಧಪಟ್ಟಂಥಾ ಸಾಮಾನುಗಳ ಮೇಲೆ ಈ ತೆರಿಗೆ ಹೆಚ್ಚಾಗಿ ಹಾಕಿರತಕ್ಕಂಥಾದ್ದು ಅಷ್ಟು ಸೂಕ್ತವಾದುದು ಎಂದು ನನಗೆ ಕಾಣಿಸುತ್ತಾ ಇಲ್ಲ. ಇದನ್ನು ತಾವು ಯೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಟೇಪ್ ರಿಕಾರ್ಡ್ಸ್ ಬಗ್ಗೆ ತೆರಿಗೆ ಹಾಕಿದ್ದೀರಿ. ಇದು ಎಲ್ಲರೂ ಉಪಯೋಗಿಸುವಂಥಾ ವಸ್ತು. ಅನುಕೂಲಸ್ಥರೂ ಕೂಡ ಈ ಟೇಪ್ ರಿಕಾರ್ಡ್ ಅನ್ನು ಉಪಯೋಗಿಸುತ್ತಾರೆ. ಆದುದರಿಂದ ಈ ಟೇಪ್ ರಿಕಾರ್ಡ್ ಅನ್ನು ಉಪಯೋಗಕ್ಕೆ ಎಲ್ಲರೂ ಇಟ್ಟುಕೊಂಡಿರುವುದರಿಂದ ಅದರ ಮೇಲೆ ತೆರಿಗೆ ಹಾಕುವುದು ಸರಿಯೇ ಅನ್ನುವುದನ್ನು ತಾವು ಯೋಚನೆ ಮಾಡಬೇಕು.

ಇನ್ನು ಫರ್ನೀಚರ್ ಮೇಲೆ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲವು ಪದಾರ್ಥಗಳ ಮೇಲೆ ತೆರಿಗೆ ಹಾಕಿದ್ದೀರಿ. ಬಡವರು ಉಪಯೋಗಿಸುವಂಥಾ ಫರ್ನೀಚರನ್ನು ಬಿಟ್ಟು ಅನುಕೂಲಸ್ಥರು ಉಪಯೋಗಿಸುವ ಫರ್ನೀಚರ್ ಮೇಲೆ ತೆರಿಗೆ ಹೆಚ್ಚಿಸಿದರೆ ಅದರಿಂದ ಏನೂ ತೊಂದರೆಯಾಗುವುದಿಲ್ಲ.

ಇನ್ನು ಸಿಗರೇಟ್ಸ್ ಪೈಪ್ಸ್ ಮತ್ತು ಬೀಡಿಗಳ ಮೇಲೆ ತೆರಿಗೆ ಹಾಕಿದ್ದೀರಿ. ಪೈಪ್ಸ್ ಅನ್ನು ಮಾನ್ಯ ಮುಖ್ಯ ಮಂತ್ರಿಗಳು ಉಪಯೋಗಿಸುತ್ತಿದ್ದಾರೆ, ಅನುಕೂಲಸ್ಥರೂ ಇದನ್ನು ಉಪಯೋಗಿಸುತ್ತಾರೆ. ನಾನಂತೂ ಅದನ್ನು ಉಪಯೋಗಿಸುವುದೂ ಇಲ್ಲ, ಆ ವಿಷಯ ನನಗಂತೂ ಗೊತ್ತಿಲ್ಲ. ಅಂಥಾವುಗಳ ಮೇಲೆ ಬೇಕಾದರೆ ತೆರಿಗೆ ಹಾಕಿಕೊಳ್ಳಿ, ಆದರೆ ಬೀಡಿ ಮೇಲೆ ತೆರಿಗೆ ಹಾಕುವುದು ಅಷ್ಟು ಸರಿಯಾದುದು ಎಂದು ನನಗೆ ಕಾಣುವುದಿಲ್ಲ.

ಇನ್ನು ಸ್ಟೈನ್‌ಲೆಸ್ ಸ್ಟೀಲ್ ಮೇಲೆ ತೆರಿಗೆ ಹಾಕಿದ್ದೀರಿ ಇದು ದಿನಬಳಕೆ ವಸ್ತು, ಹಿಂದೆ ಹಿತ್ತಾಳೆ ಅಡಿಗೆ ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಅಲ್ಲದೆ ಯಾವುದಾದರೂ ಮನೆಗೆ, ಫಂಕ್ಷನ್‌ಗಳಿಗೆ ಹೋಗಬೇಕಾದರೆ ಬೆಳ್ಳಿ ಪಾತ್ರೆಗಳನ್ನು ತೆಗೆದುಕೊಂಡು ಹೋಗಿ ಓದಿಸುತ್ತಿದ್ದರು. ಈಗ ಬೆಳ್ಳಿ ಪದಾರ್ಥಗಳ ಬೆಲೆ ವಿಪರೀತ ಜಾಸ್ತಿಯಾಗಿರುವುದರಿಂದಲೂ ಮತ್ತು ಈಗ ಎಲ್ಲಾ ಕಡೆಯೂ ಆಲ್ ಎಲೆಕ್ಟ್ರಿಕಲ್ ಹೋಮ್ ಬಂದುದರಿಂದಲೂ ಮತ್ತು ಗ್ಯಾಸ್ ಉಪಯೋಗಿಸುವುದರಿಂದಲೂ ಎಲ್ಲರೂ ಕೂಡ ಈಗ ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳನ್ನೇ ಉಪಯೋಗಿಸುತ್ತಿದ್ದಾರೆ, ಇದು ದಿನಬಳಕೆಯ ವಸ್ತು ವಾಗಿರುವುದರಿಂದ ಇದಕ್ಕೆ ತೆರಿಗೆ ಜಾಸ್ತಿ ಮಾಡುವುದು ಒಳ್ಳೆಯದಲ್ಲ ಎಂದು ನನಗೆ ಅನಿಸುತ್ತದೆ.

ಇನ್ನು ಮೋಟಾರ್ ವೆಹಿಕಲ್ಸ್‌ಗೆ ಸಂಬಂಧಪಟ್ಟಂತೆ ಕೆಲವು ಆರ್ಟಿಕಲ್ಸ್ ಮೇಲೆ ತೆರಿಗೆ ಹಾಕಿದ್ದೀರಿ. ಈಗಾಗಲೇ ಬ್ಯಾಟರಿ ಬೆಲೆ ಜಾಸ್ತಿಯಾಗಿದೆ. ಇದರ ಮೇಲೆ ಸೇಲ್ಸ್ ಟ್ಯಾಕ್ಸ್ ಬೇರೆ ಕೊಡಬೇಕಾಗಿದೆ. ಈಗ ಇದರ ಮೇಲೆ ೧೬ ಪರ್ಸೆಂಟ್‌ನವರೆಗೂ ಕೂಡ ತೆರಿಗೆ ಹಾಕಿದರೆ ಏನಾಗುತ್ತದೆ ಎಂದರೆ, ಸಾಮಾನಿನ ಬೆಲೆ ೧೦೦ ರೂಪಾಯಿ ಇದ್ದುದು ೧೬೦–೧೭೦ ರೂಪಾಯಿ ಆಗುತ್ತದೆ. ಈ ತೆರಿಗೆಗಳಿಂದ ಬೆಲೆಗಳು ಮತ್ತಷ್ಟು ಏರುವುದಕ್ಕೆ ಕಾರಣವಾಗುತ್ತದೆಯೇ ವಿನಾ ಕಡಿಮೆಯಾಗುವುದಿಲ್ಲ. ಆದುದರಿಂದ ಸಾಧಾರಣವಾಗಿ ಬೆಲೆಗಳನ್ನು ಇಳಿಸುವ ರೀತಿಯಲ್ಲಿ, ಬೆಲೆಗಳು ಏರದೇ ಇರುವ ಹಾಗೆ ನೋಡಿಕೊಳ್ಳಬೇಕಾದರೆ ಈ ಸೇಲ್ಸ್ ಟ್ಯಾಕ್ಸ್ ಹಾಕುವುದಕ್ಕೆ ಒಂದು ಮಿತಿ ಇಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ. ತಮಗೆ ಹೇಳಬೇಕಾದರೆ, ಇಷ್ಟೀಚೆಗೆ ತೊಗರೀಬೇಳೆ ಬೆಲೆ ಜಾಸ್ತಿಯಾಗಿದೆ. ಈಗ ನೀವು ಅದರ ಮೇಲೆ ೪ ಪರ್ಸೆಂಟ್

ಟ್ಯಾಕ್ಸ್ ಹಾಕಿದರೆ ಆವಾಗ ಅದರ ಧಾರಣೆ ಒಂದು ಮೂಟೆಗೆ ೨೦–೨೫ ರೂಪಾಯಿ ಜಾಸ್ತಿ ಬೀಳುತ್ತದೆ. ಇದರಿಂದ ಖಂಡಿತವಾಗಿಯೂ ಬೆಲೆಗಳು ಜಾಸ್ತಿಯಾಗುತ್ತದೆ. ಅದರಲ್ಲೂ ಕೂಡ ಆಹಾರಕ್ಕೆ ಸಂಬಂಧ ಪಟ್ಟಂಥ ವಸ್ತುಗಳು, ಬಡವರು ಉಪಯೋಗಿಸುವಂಥಾ ವಸ್ತುಗಳಾಗಿರುವುದರಿಂದ ಇದರ ಮೇಲೆ ಹಾಕುವ ತೆರಿಗೆಯನ್ನು ಪದೇ ಪದೇ ಏರಿಸುತ್ತಾ ಹೋಗುವುದು ಸರಿಯಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ವಾಲ್‌ಟೈಲ್ಸ್ ಮೇಲೆ ಟ್ಯಾಕ್ಸ್ ಹಾಕಿದ್ದೀರಿ. ಇದನ್ನು ಸಾಮಾನ್ಯವಾಗಿ ಹೆಚ್ಚಾಗಿ ಸಾಹುಕಾರರೇ ಉಪಯೋಗಿಸುವುದರಿಂದ ಅದಕ್ಕೆ ಎಷ್ಟು ಬೇಕಾದರೂ ತೆರಿಗೆ ಹಾಕಿಕೊಳ್ಳಿ.

ಇನ್ನು ಐಸ್, ಐಸ್–ಕ್ಯಾಂಡಿ, ಐಸ್ ಕ್ರೀಂ ಮತ್ತು ಐಸ್ ಫ್ರೂಟ್ ಇದರ ಮೇಲೆ ತೆರಿಗೆ ಹಾಕಿದ್ದೀರಿ. ಅನೇಕ ಆಂಗಡಿಗಳಲ್ಲಿ ಈ ಐಸ್‌ನ್ನು ಐಸ್ ಕ್ರೀಂ ಮತ್ತು ಐಸ್ ಫ್ರೂಟ್‌ಗೆ ಉಪಯೋಗಿಸುತ್ತಾರೆ. ಇಂಥಾದ್ದರ ಮೇಲೆ ತೆರಿಗೆ ಹಾಕುವುದು ಸರಿಯೇ ಅನ್ನುವುದನ್ನು ಯೋಚನೆ ಮಾಡಬೇಕು. ಮತ್ತು ಕರಾವಳಿ ಪ್ರದೇಶದಲ್ಲಿ ಫಿಷ್‌ಗಳನ್ನು ಶೇಖರಣೆಮಾಡಿ ಇಡುವುದಕ್ಕೆ ಈ ಐಸ್‌ನ್ನು ಉಪಯೋಗಿಸುವುದರಿಂದ ಇದರ ಮೇಲೆ ತೆರಿಗೆ ಹಾಕಿದರೆ ಅದರಿಂದ ನಿಮಗೇನೇ ಜಾಸ್ತಿಯಾದ ಹಾಗೆ ಆಗುವುದಿಲ್ಲವೇ ? ಆದುದರಿಂದ ಇದರ ಮೇಲೆ ಒಂದು ಹೆಚ್ಚಿನ ತೆರಿಗೆ ಹಾಕುವುದು ಸರಿಯೇ ಅನ್ನುವುದನ್ನು ತಾವು ಯೋಚನೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಐಸ್ ಮೇಲೆ ತೆರಿಗೆ ವಿಧಿಸುವುದು ಅನೇಕ ಸಂದರ್ಭಗಳಲ್ಲಿ ತೊಂದರೆಯಾಗುತ್ತದೆಂದು ಹೇಳುತ್ತೇನೆ. ಇನ್ನು ಬಣ್ಣ ಮತ್ತು ವಾರ್ನಿಷ್‌ಗಳ ಬೆಲೆ ವಿಪರೀತವಾಗಿ ಏರಿದೆ. ಮತ್ತೆ ಅವುಗಳ ಮೇಲೆ ತೆರಿಗೆಯನ್ನು ವಿಧಿಸಿದರೆ ಸ್ವಲ್ಪ ಕಷ್ಟವಾಗುತ್ತದೆಂದು ಹೇಳುತ್ತೇನೆ. ಮ್ಯೂಸಿಕಲ್ ಇನ್‌ಸ್ಟ್ರುಮೆಂಟ್ ಮೇಲೆ ತೆರಿಗೆ ಹಾಕಿರುವುದು ಅಷ್ಟು ಒಳ್ಳೆಯದಲ್ಲ. ಒಂದು ಕಡೆ ಕಲೆಗೆ ಸಹಾಯ ಮಾಡುತ್ತೇವೆ ಎಂದು ಹೇಳಿ, ಇನ್ನೊಂದು ಕಡೆ ಸಂಗೀತ ಉಪಕರಣಗಳ ಮೇಲೆ ತೆರಿಗೆಯನ್ನು ಹಾಕುವುದು ಖಂಡಿತ ಒಳ್ಳೆಯದಲ್ಲ. ಹಾಗೆಯೇ ಗ್ಯಾಸ್ ಸ್ಟೌ, ಕೆರೋಸೀನ್ ಸ್ಟೌಗಳ ಮೇಲೆ ತೆರಿಗೆಯನ್ನು ಹಾಕುವುದು ಖಂಡಿತ ಒಳ್ಳೆಯದಲ್ಲ. ಅನೇಕ ಬಡಬಗ್ಗರು ಕೆರೋಸೀನ್ ಸ್ಟೌಗಳನ್ನು ಉಪಯೋಗಿಸುತ್ತಿದ್ದಾರೆ. ಇದು ಅವರಿಗೆ ನಿತ್ಯ ಬಳಕೆ ವಸ್ತುವಾಗಿರುವುದರಿಂದ, ಅದರ ಮೇಲೆ ಹೆಚ್ಚು ತೆರಿಗೆ ವಿಧಿಸುವುದು ಸೂಕ್ತವಲ್ಲವೆಂದು ಹೇಳುತ್ತೇನೆ. ಇನ್ನು ಅಲ್ಯೂಮಿನಿಯಂ ಮತ್ತು ಬ್ರಾಸ್ ಸಾಮಾನುಗಳನ್ನು ಸಾಹುಕಾರರು ಯಾರೂ ಉಪಯೋಗಿಸುವುದಿಲ್ಲ. ಬಡವರು ಇವುಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಫುಟ್‌ಪಾತ್‌ನಲ್ಲಿ ಆಡಿಗೆ ಮಾಡಿಕೊಂಡು ಜೀವನ ಮಾಡುವವರು ಇಂತಹ ಪಾತ್ರೆಗಳನ್ನು ಉಪಯೋಗಿಸುತ್ತಾರೆ. ಅಂತಹ ಸಾಮಾನುಗಳ ಮೇಲೂ ತೆರಿಗೆ ಹಾಕುವುದು ಒಳ್ಳೆಯದಲ್ಲವೆಂದು ಹೇಳುತ್ತೇನೆ. ಇನ್ನು ವ್ಯವಸಾಯೋಪಕರಣಗಳ ಮೇಲೆ ತೆರಿಗೆ ಹಾಕಿರುವುದು ನನಗೆ ಅಷ್ಟು ಸರಿಯಾಗಿ ಕಾಣುವುದಿಲ್ಲವೆಂದು ಹೇಳುತ್ತೇನೆ. ಇನ್ನು ಸ್ಪೇಷನರಿ ಮತ್ತು ಇಂಕುಗಳ ಬೆಲೆ ಬಹಳ ಜಾಸ್ತಿಯಾಗಿರುವುದರಿಂದ ಅವುಗಳ ಮೇಲೆ ತೆರಿಗೆಯನ್ನು ಹೆಚ್ಚು ಹಾಕಬಾರದು. ನಾನು ನಡೆಸುತ್ತಿರುವ ಇನ್‌ಸ್ಟಿಟ್ಯೂಟ್‌ನಲ್ಲಿ ಸುಮಾರು ೩೫ ಟೈಪ್‌ರೈಟರುಗಳಿಗೆ ರಿಬ್ಬನ್‌ನ್ನು ಉಪಯೋಗಿಸುತ್ತಿದ್ದೇನೆ. ಮೊದಲು ಒಂದು ರಿಬ್ಬನ್ ನಾಲ್ಕಾಣೆಗೆ ಸಿಗುತ್ತಿದ್ದುದು ಇಂದು ಅದರ ಬೆಲೆ ೧೦ ರೂಪಾಯಿ ಆಗಿದೆ. ಆದುದರಿಂದ ಟೈಪರೈಟರುಗಳಿಗೆ ಉಪಯೋಗಿಸುವ ರಿಬ್ಬನ್ ಮೇಲೆ ತೆರಿಗೆಯನ್ನು ಹಾಕುವುದು ಸ್ವಲ್ಪವೂ ಉಚಿತವಲ್ಲವೆಂದು ಹೇಳುತ್ತೇನೆ.

ಒಟ್ಟಿನಲ್ಲಿ ಹೇಳುವುದಾದರೆ, ಪದೇ ಪದೇ ತೆರಿಗೆಯನ್ನು ಹೆಚ್ಚು ಮಾಡುವ ಸ್ವಭಾವವನ್ನು ಸರ್ಕಾರ ಕೈಬಿಡಬೇಕು. ಅನಾವಶ್ಯಕವಾದ ಖರ್ಚನ್ನು ತಪ್ಪಿಸಿ, ವಸೂಲು ಮಾಡುವ ತೆರಿಗೆಯನ್ನು ಎಚ್ಚರಿಕೆಯಿಂದ ವಸೂಲು ಮಾಡಿದರೆ ಹೊಸ ತೆರಿಗೆಯನ್ನು ಹಾಕುವ ಪ್ರಮೇಯ ತಪ್ಪುತ್ತದೆ. ಆದುದರಿಂದ, ಹೊಸ ತೆರಿಗೆಯನ್ನು ಹಾಕುವುದನ್ನು ಆದಷ್ಟು ಕಡಮೆ ಮಾಡಬೇಕೆಂದು ಹೇಳುತ್ತೇನೆ. ಈಗ ಸದನದಲ್ಲಿ ಮಾನ್ಯ ಪ್ರಾರಾಡಳಿತ ಸಚಿವರೂ ಇದ್ದಾರೆ. ತಾವು ಅವರೂ ಇಬ್ಬರೂ ಮಾತನಾಡಿ, ಆಕ್ಟ್ರಾಯ್‌ನ್ನು ರದ್ದು ಮಾಡಿ, ಅದಕ್ಕೆ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ನಾವು ಎಷ್ಟು ತೆರಿಗೆಯನ್ನು ಹಾಕಬೇಡಿರಿ ಎಂದು ಹೇಳಿದರೂ ಸರ್ಕಾರದವರು ಹೆಚ್ಚು ಹೆಚ್ಚು ತೆರಿಗೆಯನ್ನು ವಿಧಿಸುತ್ತಿರುವುದರಿಂದ, ನಾವು ಹೇಳುವುದು ಅರಣ್ಯರೋಧನವಾಗಿದೆ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಎಸ್. ಪ್ರಮೀಳ (ಚಾಮರಾಜಪೇಟೆ)—ಮಾನ್ಯ ಅಧ್ಯಕ್ಷರೇ, ಆಯವ್ಯಯ ಅಧಿವೇಶನ ಮುಗಿದು ಹೋಯಿತು, ಇನ್ನು ಯಾವುದೂ ಹೊಸ ತೆರಿಗೆ ಹಾಕುವುದಿಲ್ಲವೆಂದು ಸಾರ್ವಜನಿಕರಿಗೆ ತಿಳಿಸಿ, ಈಗ ಮಾರಾಟ ತೆರಿಗೆಗೆ ತಿದ್ದುಪಡಿ ತಂದು, ಸುಮಾರು ೨೪೧ ಲಕ್ಷ ರೂಪಾಯಿಗಳಿಗೂ ಹೆಚ್ಚು ಆದಾಯ ತರುವಷ್ಟು ತೆರಿಗೆಯನ್ನು ಸಾರ್ವಜನಿಕರ ಮೇಲೆ ಹಾಕಿರುವುದು ಸರ್ಕಾರ ಮೋಸ ಮಾಡಿದ ಹಾಗಾಗಿದೆ. ಬಹುಶಃ ಇದು ಸರ್ಕಾರದ ನೀತಿಯೇ ಎಂದು ಕೇಳಬಯಸುತ್ತೇನೆ. ಜನರಿಗೆ ಬೇಕಾಗಿರುವುದು ಮುಖ್ಯವಾಗಿ ಮೂರು ವಸ್ತುಗಳು, ಅನ್ನ, ಬಟ್ಟೆ ಮತ್ತು ವಾಸಿಸಲಿಕ್ಕೆ ಮನೆ. ಈಗ ಸರ್ಕಾರದವರು ತಂದಿರುವ ಷೆಡ್ಯೂಲ್‌ನ್ನು ನೋಡಿದರೆ, ಅಕ್ಕಿ ಮತ್ತು ಭತ್ತ ಎರಡರ ಮೇಲೂ ತೆರಿಗೆಯನ್ನು ಹಾಕಿದ್ದಾರೆ. Either you levy or abolish the tax. ಭತ್ತದ ಮೇಲೆ ತೆರಿಗೆ ಹಾಕಿ, ಅಕ್ಕಿಯ ಮೇಲೆ ಹಾಕಬೇಡಿ. ಆದರೆ, ಭತ್ತ ಮತ್ತು ಅಕ್ಕಿ, ಎರಡರ ಮೇಲೆ ಏತಕ್ಕೆ ತೆರಿಗೆ ವಿಧಿಸುತ್ತೀರಿ? Where a tax has been levied under this Act in respect of the sale or purchase of any paddy referred to in seril No. 9, the tax leviable on rice procured out of such paddy shall be reduced by the amount of tax levied on such paddy. ರಿಡಕ್ಷನ್ ಎಂದರೆ ಏನೆಂದು ನನಗೆ ಅರ್ಥವಾಗುತ್ತಿಲ್ಲ. ಇಲ್ಲಿ ರಿಡಕ್ಷನ್ ಬರುವುದೇ ಇಲ್ಲ. ಭತ್ತಕ್ಕೆ ತೆರಿಗೆ ಹಾಕಿ, ಅಕ್ಕಿಗೆ ತೆರಿಗೆಯನ್ನು ಕಡಮೆ ಮಾಡಿದರೆ ರಿಡಕ್ಷನ್ ಆಗುತ್ತಿತ್ತು. ಆದರೆ, ಎರಡಕ್ಕೂ ನಾಲ್ಕು ಪರ್ಸೆಂಟ್ ತೆರಿಗೆ ಹಾಕಿರುವುದರಿಂದ, ಈ ಎಕ್ಸ್‌ಪ್ಲನೇಷನ್ನಿನ ಅಗತ್ಯವಿಲ್ಲ, ಆದುದರಿಂದ ಇದನ್ನು ತೆಗೆದು ಹಾಕಬೇಕು. ಇದು ಜನರನ್ನು ಸಂಶಯದಲ್ಲಿರಿಸಿ, ಮೋಸ ಮಾಡುವುದಕ್ಕೆ ಅವಕಾಶವಾಗುತ್ತದೆ ವರ್ತಕರು ಇದನ್ನು ದುರುಪಯೋಗಪಡಿಸಿಕೊಂಡು, ಗ್ರಾಹಕರ ಮೇಲೆ ಈ ತೆರಿಗೆಯನ್ನು ಹಿಂದಾತ್ತಾರೆ ಮನುಷ್ಯ ಜೀವನ ಮಾಡಬೇಕಾದರೆ ಅನ್ನ ಬಹು ಮುಖ್ಯ. ಇದರ ಮೇಲೆ ಸರ್ಕಾರದವರು ತೆರಿಗೆ ಹಾಕಿರುವುದು ಬಹಳ ತಪ್ಪು. ತಮಿಳುನಾಡಿನಲ್ಲಿ ಇದರಮೇಲೆ ತೆರಿಗೆಹಾಕಿಲ್ಲ. ಆದುದರಿಂದ, ನಮ್ಮ ಸರ್ಕಾರದವರೂ ಸಹ ಇದರ ಮೇಲೆ ಹಾಕಿರುವ ನಾಲ್ಕು ಪರ್ಸೆಂಟ್ ತೆರಿಗೆಯನ್ನು ತೆಗೆದು ಬಿಡಬೇಕು. ಹಾಗೆ ಮಾಡಿದರೆ ಸರ್ಕಾರಕ್ಕೇನೂ ಅಂತಹ ಕಷ್ಟವಾಗುವುದಿಲ್ಲವೆಂದು ಹೇಳಬಯಸುತ್ತೇನೆ.

ಮನುಷ್ಯ ಬದುಕಬೇಕಾದರೆ ಅನ್ನ ಹೇಗೆ ಮುಖ್ಯವೋ ಹಾಗೆ ಬಟ್ಟೆಯೂ ಮುಖ್ಯವಾಗಿದೆ. ಇದರ ಮೇಲೂ ಸರ್ಕಾರದವರು ತೆರಿಗೆಯನ್ನು ಹಾಕಿದ್ದಾರೆ. ಐಟಂ ೨೪ (ಎ) ನಲ್ಲಿ ಒಂದು ಹೊಸ ತಿದ್ದುಪಡಿಯನ್ನು ತರಲಾಗಿದೆ. ಹೊಲೆಯುವ ದಾರದ ಮೇಲೆ ತೆರಿಗೆಯನ್ನು ಹಾಕಲಾಗಿದೆ. ಮನೆಯಲ್ಲಿರುವ ಹೆಣ್ಣು ಮಕ್ಕಳು ಸರಿಯಾಗಿ ತೊಡುವುದಕ್ಕೆ ಬಟ್ಟೆಯಿಲ್ಲದ ಸ್ಥಿತಿ ಕರ್ನಾಟಕದಲ್ಲಿದೆ. ಹರಿದು ಚಿಂದಿಚಿಂದಿಯಾದ ಬಟ್ಟೆಯನ್ನು ಹೊಲೆದು ಮಾನ ಮುಚ್ಚುಕೊಳ್ಳುವ ಪರಿಸ್ಥಿತಿ ಇಂದಿನ ಕರ್ನಾಟಕದ ಹೆಣ್ಣು ಮಕ್ಕಳಿಗಿದೆ. ಅಂಥಾ ದಾರದ ಮೇಲೂ ಇಂದು ಸರ್ಕಾರದವರು ಮೂರು ಪರ್ಸೆಂಟ್ ತೆರಿಗೆಯನ್ನು ಹಾಕಿದ್ದಾರೆ. ಇದಕ್ಕೆ ಕಾರಣವೇನೆಂಬುದು ನನಗೆ ಗೊತ್ತಿಲ್ಲ. ಮೂರು ಪರ್ಸೆಂಟ್ ತೆರಿಗೆ ಕೊಟ್ಟು ದಾರ ಕೊಳ್ಳುವ ಬದಲು ಹರಿದ ಬಟ್ಟೆಯನ್ನು ಹಾಗೆ ಬಿಸಾಡುವ ಪರಿಸ್ಥಿತಿ ಬಂದೀತು. ಕಳೆದ ಸಲ ಈ ವಾತವ ಮೇಲೆ ತೆರಿಗೆಯನ್ನು ಎಕ್ಸ್‌ಕ್ಲೂಡ್ ಮಾಡಿದ್ದರು,

All kinds of mill yarn excluding cotton yarn and filature silk Three percent.

ಶ್ರೀ ಎಸ್. ಎಂ. ಯಾಹ್ಯಾ—ಷೆಡ್ಯೂಲ್ ಎರಡು ಮಲ್ಟಿಪಾಯಿಂಟ್ ಟ್ಯಾಕ್ಸ್‌ಗೆ ಸಂಬಂಧಪಟ್ಟಿದು ಅದನ್ನು ಸಿಂಗಲ್ ಪಾಯಿಂಟ್ ಆಗಿ ಕನ್‌ವರ್ಟ್ ಮಾಡುತ್ತಿದ್ದೇವೆ, ಒಂದೂವರೆ ಪರ್ಸೆಂಟ್ ಇದ್ದುದನ್ನು ಮಲ್ಟಿ ಪಾಯಿಂಟ್ ಟ್ಯಾಕ್ಸ್ ಎಷ್ಟು ಬೇಕಾದರೂ ಹಾಕಬಹುದು. ಆದರೆ, ಅದನ್ನೆಲ್ಲ ತೆಗೆದು, ಕೇವಲ ಮೂರು ಪರ್ಸೆಂಟ್ ಎಂದು ಮಾಡಲಾಗಿದೆ.

ಶ್ರೀಮತಿ ಎಸ್. ಪ್ರಮೀಳ—ನಾನು ಮಾತನಾಡುತ್ತಿರುವುದು ಐಟಂ ನಂ. ೨೪ನ್ನು ತಿದ್ದುಪಡಿ ಮಾಡಿರುವ ಬಗ್ಗೆ. ಈ ರೀತಿ ತಿದ್ದುಪಡಿ ಮಾಡಿರುವುದು ಹೊಲಿಗೆ ದಾರಕ್ಕೆ ಮೂರು ಪರ್ಸೆಂಟ್ ಮತ್ತು ಯಾರ್ನ್‌ಗೆ ಮೂರು ಪರ್ಸೆಂಟ್ ಬೀಳುತ್ತದೆ. ಇದರಿಂದಾಗಿ, ಜನರಿಗೆ ಬಹಳ ಆಘಾತವಾಗುತ್ತದೆ. ಮಲ್ಟಿ ಪಾಯಿಂಟ್ ಆಗಲಿ, ಸಿಂಗಲ್ ಪಾಯಿಂಟ್ ಆಗಲಿ, ಹೊಲಿಗೆ ದಾರದ ಮೇಲೆ ಮಾತ್ರ ತೆರಿಗೆಯನ್ನು ಹಾಕಲೇಬಾರದೆನ್ನುವುದು ನನ್ನ ಅಭಿಪ್ರಾಯ.

ಇನ್ನು ನಾಲ್ಕನೇ ಷಡ್ಯೂಲಿನಲ್ಲಿ ಕಾಟನ್ ಯಾರ್ನ್ ಮೇಲೆ ತೆರಿಗೆಯನ್ನು ಹಾಕಲಾಗಿದೆ. ಐಟಂ ನಂ. aರಲ್ಲಿ Cotton yarn, but not including cotton...one and a half per cent ಎಂದು ಹೇಳಲಾಗಿದೆ. ಇದರಲ್ಲಿ ಒಂದೂವರೆ ಪರ್ಸೆಂಟ್ ಇದ್ದುದನ್ನು ಮೂರು ಪರ್ಸೆಂಟ್‌ಗೆ ಏರಿಸಿದರೆ ಇದರ ಪರಿಣಾಮ ಬಡವರ ಮೇಲೆ ಏನಾಗುತ್ತೆಂಬುದನ್ನು ಸರ್ಕಾರದವರು ಯೋಜನೆ ಮಾಡುವುದು ಬೇಡವೇ ? ಅನ್ನದ ಮೇಲೆ, ಬಟ್ಟೆ ಮೇಲೆ ಸರ್ಕಾರದವರು ತೆರಿಗೆಯನ್ನು ಹಾಕುವುದು ಯಾವ ನ್ಯಾಯ? ಬಡವರಿಗೆ ಇದರಿಂದ ಅನುಕೂಲವಾಗುತ್ತದೆಂದು ಸರ್ಕಾರ ಭಾವಿಸಿದೆಯೇ ? ಅದನ್ನು ಸರ್ಕಾರ ಯೋಚನೆ ಮಾಡಬೇಕು. ಮೊದಲು ಒಂದೂವರೆ ಪರ್ಸೆಂಟ್ ಏನಿತ್ತು, ಅದನ್ನೇ ಮುಂದುವರಿಸಿ, ಈಗ ಹೆಚ್ಚು ಮಾಡಿರುವ ಮೂರು ಪರ್ಸೆಂಟ್‌ನ್ನು ತೆರಿಗೆಯನ್ನು ತೆಗೆದುಹಾಕಿ.

ಸರ್ಕಾರದವರು ಅನ್ನದ ಮೇಲೆ ತೆರಿಗೆ ಹಾಕಿದರು, ಬಟ್ಟೆ ಮೇಲೆ ತೆರಿಗೆ ಹಾಕಿದರು. ಹೋಗಲಿ, ಜ್ಞಾನಾರ್ಜನೆ ಮೇಲಾದರೂ ಬಿಡಬೇಡವೆ. ಅದರ ಮೇಲೂ ತೆರಿಗೆಯನ್ನು ಹಾಕಲಾಗಿದೆ.

ಮಕ್ಕಳು ಬರೆಯತಕ್ಕ ಇಂಕಿಗೆ, ಮಕ್ಕಳು ಓದತಕ್ಕ ಪ್ರಿಂಟಿಂಗ್ ಮೆಟೀರಿಯಲ್ಸ್‌ಗೆ ೮ ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಾರೆ. ಊಟ ಬೇಡ ಬಟ್ಟೆ ಬೇಡ ಏನೋ ಓದಿಕೊಂಡು ಜೀವನ ಮಾಡೋಣ ಎಂದರೆ ಓದ ಬೇಕಾದ ಸಲಕರಣೆಗಳ ಮೇಲೂ ೮ ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಾರೆ. ಇದು ನ್ಯಾಯವಾದದ್ದೇ ? ೬ ವರ್ಷದಿಂದ ೧೪ ವರ್ಷ ವರೆಗಿನ ಎಲ್ಲಾ ಮಕ್ಕಳಿಗೂ ಕಡ್ಡಾಯ ಶಿಕ್ಷಣ ಕೊಡಬೇಕು ಎಂದು ಕಾನ್‌ಸ್ಟಿಟ್ಯೂಷನ್‌ಲ್ಲಿ ಹೇಳಿದ್ದಾರೆ. ಹೀಗಿರುವಾಗ ಮಕ್ಕಳು ಓದುವುದಕ್ಕೆ ಉಪಯೋಗಿಸತಕ್ಕ ಇಂಕ್ ಪ್ರಿಂಟಿಂಗ್ ಮೇಟೀರಿಯಲ್ಸ್‌ಗೆ ೮ ಪರ್ಸೆಂಟ್ ತೆರಿಗೆಯನ್ನು ಹಾಕಿರುವುದು ಸಾಧುವಾದುದಲ್ಲ ಸೆಕ್ಷನ್ ೧೪(೨)ರಲ್ಲಿ ಮಕ್ಕಳ ಬರವಣಿಗೆ ಉಪಯೋಗಿಸತಕ್ಕ ಆಲ್ ಕೈಂಡ್ಸ್ ಆಫ್ ಇಂಕ್‌ಗೆ ೮ ಪರ್ಸೆಂಟ್ ತೆರಿಗೆಯನ್ನು ಏನು ಹಾಕಿದ್ದಾರೆ, ಅದನ್ನು ಎಕ್ಸ್‌ಪ್ಲೂಡ್ ಮಾಡಬೇಕು, ತೆಗೆದುಹಾಕಬೇಕು, ಇದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಸರ್ಕಾರದವರು ಬಡವರಿಗೆ ಸೈಟು ಕೊಡುತ್ತೇವೆ, ಬಡವರಿಗೆ ಮನೆಕಟ್ಟಿಸಿ ಕೊಡುತ್ತೇನೆ ಎಂದು ಬಹಳ ದೊಡ್ಡದಾಗಿ ಘೋಷಣೆ ಮಾಡುತ್ತಾರೆ. ಬಡವರಿಗೆ ಮನೆಕಟ್ಟಿ ಕೊಳ್ಳುವುದಕ್ಕೆ ಸಹಕಾರ ಸಂಘಗಳ ಮುಖಾಂತರ ಸಿಮೆಂಟ್ ಕೊಡುತ್ತೇವೆ, ಸ್ಟೀಲ್ ಕೊಡುತ್ತೇವೆ ಎಂದು ಘೋಷಣೆ ಮಾಡುತ್ತಾರೆ. ಆದರೆ ಈ ಮಸೂದೆಯಲ್ಲಿ ಸಿಮೆಂಟ್, ಪೈಯಿಂಟ್ಸ್, ಕಲರ್ಸ್‌ಡೈಸ್ ಮತ್ತು ವಾರ್ನಿಷ್ ಇವೆಲ್ಲಕ್ಕೂ ಕೂಡ ತೆರಿಗೆಯನ್ನು ಹಾಕಿದ್ದಾರೆ. ಮನೆ ಕಟ್ಟುವುದಕ್ಕೆ ಉಪಯೋಗಿಸುವ ಎಲ್ಲಾ ಸಾಮಾನುಗಳ ಮೇಲೂ ಈ ತೆರಿಗೆಯನ್ನು ಹೆಚ್ಚು ಮಾಡುತ್ತಾ ಹೋದರೆ ಬಡವರು ಮನೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಗುಡಿಸಲುಗಳಲ್ಲಿಯೆ ವಾಸ ಮಾಡುತ್ತಾ ಭೂಮಿಯೇ ಹಾಸಿಗೆ ಆಕಾಶವೇ ಹೊದಿಕೆ ಎಂದು ಇರಬೇಕಾಗುತ್ತದೆ. ಬಡವರು ಮನೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ಮನೆ ಕಟ್ಟುವ ಸಾಮಾನುಗಳ ಮೇಲೆ ಹಾಕಿರತಕ್ಕ ತೆರಿಗೆಯನ್ನು ತೆಗೆದುಹಾಕಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಆ ಮೇಲೆ ಬಟ್ಟೆ ಬೇಡ ಮನೆ ಬೇಡ ಮನುಷ್ಯ ಬದುಕುವುದಕ್ಕೆ ಬೇಕಾದ, ಜೀವದ ಉಸಿರಿಗೆ ಬೇಕಾದ ಆಕ್ಸಿಜನ್ನಿಗೆ ಕೂಡ ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ. ಆಸ್ಪತ್ರೆಯಲ್ಲಿ ಸಾಯುತಕ್ಕ ರೋಗಿಗೆ ಆಕ್ಸಿಜನ್ ತಂದು ಕೊಟ್ಟು ಬದುಕಿಸತಕ್ಕ ವಸ್ತುವಿಗೆ ಟ್ಯಾಕ್ಸ್ ಹಾಕಬಾರದಾಗಿತ್ತು. ಮೆಡಿಸಿನ್ನಿಗೆ ೮ ಪೆಸೆಂಟ್ ತೆರಿಗೆ ಇತ್ತು ಈಗ ಅದನ್ನು ೧೦ ಪರ್ಸೆಂಟ್ ಮಾಡಿದ್ದಾರೆ. ಇಂದು ಎಂತಹ ಬಜೆಟ್ಟೋ, ಇದು ಎಂತಹ ತಿದ್ದುಪಡಿಯೋ ನನಗಂತೂ ಅರ್ಥವಾಗುವುದಿಲ್ಲ. ಬಟ್ಟೆ ಮೇಲೆ ತೆರಿಗೆ ಮನೆಕಟ್ಟುವ ಸಾಮಾನುಗಳ ಮೇಲೆ ತೆರಿಗೆ ಖಾಯಿಲೆ ಬಿದ್ದರೆ ಅದಕ್ಕೆ ಉಪಯೋಗಿಸತಕ್ಕ ಔಷಧಿಗೆ ತೆರಿಗೆ, ಹೀಗೆ ಎಲ್ಲಕ್ಕೂ ತೆರಿಗೆಯನ್ನು ಹಾಕಿ ಮನುಷ್ಯ ಬದುಕುವುದಕ್ಕೆ ಬಿಡುವುದಿಲ್ಲ. ಈ ರೀತಿಯ ಒಂದು ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ತಂದು ಇದಕ್ಕೆ ನಮ್ಮ ಒಪ್ಪಿಗೆಯನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಇದು ನ್ಯಾಯವಾದದ್ದೆ. ? ಈ ವಸ್ತುಗಳ ಮೇಲೆ ಹಾಕಿರತಕ್ಕ ತೆರಿಗೆಯನ್ನು ತೆಗೆದು ಇನ್ನು ಯಾವುದರ ಮೇಲೆ ಬೇಕಾದರೂ ತೆರಿಗೆಯನ್ನು ಹಾಕಿ. ಕುಡಿಯುವ ವಸ್ತುವಿನ ಮೇಲೆ ೫೦ ಪರ್ಸೆಂಟ್ ತೆರಿಗೆಯನ್ನು ಹಾಕಿ, ಲಿಕ್ಕರ್, ಟಾಡಿ, ವಿಸ್ಕಿ ರಮ್ ಇತ್ಯಾದಿ ಕುಡಿತದ ವಸ್ತುಗಳ ಮೇಲೆ ೧೦೦ ಪರ್ಸೆಂಟ್ ೨೦೦ ಪರ್ಸೆಂಟ್ ಬೇಕಾದರೂ ತೆರಿಗೆಯನ್ನು ಹಾಕಿ. ಬಡವರು ಬದುಕುವುದಕ್ಕೆ ಉಪಯೋಗಿಸುವ ಸಾಮಾನ್ಯ ಸಲಕರಣೆಗಳ ಮೇಲೆ ಏನು ತೆರಿಗೆಯನ್ನು ವಿಧಿಸಿದ್ದಾರೆ ಅದನ್ನು ತೆಗೆದುಹಾಕಿ ಬಡವರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.